ಪ್ರಕಟಣೆ

ಸಾರ್ವಜನಿಕ ಶಿಕ್ಷಣ ಇಲಾಖೆಯ 2015–16ನೇ ಸಾಲಿನ, ಬೆಳಗಾವಿ ವಿಭಾಗದೊಳಗಿನ ಪ್ರೌಢಶಾಲಾ ಶಿಕ್ಷಕರ ಘಟಕದೊಳಗಿನ ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ (www.schooleducation. kar.nic.in) ಪ್ರಕಟಿಸಲಾಗಿದೆ. ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕ ವೃಂದದವರಿಗೆ ದಿನಾಂಕ: 23–08–2015ರಿಂದ 25–08–2015ರವರೆಗೆ ಕೌನ್ಸಿಲಿಂಗ್ ಇದ್ದು, ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರ ವೃಂದದವರು ಈ ಕೆಳಕಂಡ ದಾಖಲೆಗಳೊಂದಿಗೆ ಧಾರವಾಡ ಆಯುಕ್ತಾಲಯದ ಆವರಣದಲ್ಲಿರುವ ಡಯಟ್ ಪ್ರಾರ್ಥನಾ ಮಂದಿರದಲ್ಲಿ ಸಕಾಲದಲ್ಲಿ ಹಾಜರಾಗಲು ತಿಳಿಸಿದೆ

- ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕೃತ ಇತ್ತೀಚಿನ ಭಾವಚಿತ್ರ ಲಗತ್ತಿಸಿರುವ ಸೇವಾ ದೃಢೀಕರಣ ಪತ್ರ (ಎಲ್ಲಾ ಪ್ರಕರಣಗಳ ಶಿಕ್ಷಕರುಗಳಿಗೆ ಕಡ್ಡಾಯ)
- ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದಿಸಲ್ಪಟ್ಟ ಅರ್ಜಿಯ ಪ್ರತಿ.
- ನೇಮಕಾತಿ ಆದೇಶದ ಪ್ರತಿ.
- ಖಾಯಂಪೂರ್ವ ಸೇವಾವಧಿ ಘೋಷಣೆಯಾದ ಬಗ್ಗೆ ಆದೇಶದ ಪ್ರತಿ
- ತೀವ್ರತರಹ ಖಾಯಿಲೆ/ಅಂಗವಿಕಲ ಪ್ರಕರಣದವರು ಬೆಳಗಾವಿ ವಿಭಾಗದ ವಿಭಾಗೀಯ ವೈದ್ಯಕೀಯ ಮಂಡಳಿಯಿಂದ ನೀಡಲಾದ ಮೂಲ ಪ್ರಮಾಣ ಪತ್ರ.
- ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರು ಇರುವ ಪ್ರಕರಣದವರು ಪತಿ ಅಥವಾ ಪತ್ನಿಯ ಮೂಲ ಸೇವಾ ದೃಢೀಕರಣ ಪತ್ರದೊಂದಿಗೆ ಹಾಜರಾಗುವುದು.
- ಪತಿ ಅಥವಾ ಪತ್ನಿ ಪ್ರಕರಣದವರು ಪತಿ ಅಥವಾ ಪತ್ನಿಯವರ ಮೂಲ ವಾಸ ಸ್ಥಳ ದೃಢೀಕರಣ ಪತ್ರ/ಸೇವಾ ಪ್ರಮಾಣ ಪತ್ರ.
- ಪತಿ ಮತ್ತು ಪತ್ನಿ ಹಾಗೂ ಪತಿ ಅಥವಾ ಪತ್ನಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿರುವವರು ಪತಿ ಪತ್ನಿ ಎನ್ನುವ ಬಗ್ಗೆ ದಾಖಲೆ ತರುವುದು.
- ವಿಧವಾ ಶಿಕ್ಷಕರ ಪ್ರಕರಣದವರು ಪತಿಯ ಮೂಲ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರೂ ಒಂದು ದಾಖಲೆಯನ್ನು ಹಾಜರುಪಡಿಸುವುದು.
- ಸೈನಿಕ ಪ್ರಕರಣದವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ.
- ಪ್ರಾಥಮಿಕ ಶಾಲಾ ಶಿಕ್ಷಕ ವೃಂದದಿಂದ ಪ್ರೌಢ ಶಾಲಾ ವೃಂದಕ್ಕೆ ಬಡ್ತಿ ಹೊಂದಿದ್ದಲ್ಲಿ ಬಡ್ತಿ ಆದೇಶದ ಪ್ರತಿ.
- ಒಟ್ಟಾರೆ ಆದ್ಯತೆಗೆ ಸಂಬಂಧಿಸಿದ ದಾಖಲೆ ಕಡ್ಡಾಯವಾಗಿ ತರುವುದು.

(ಮಮತಾ ವಿ.ನಾಯಕ),
ಸಹನಿರ್ದೇಶಕರು(ಆಡಳಿತ)(ಪ್ರಭಾರ),
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು,
ಅಪರ ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,

ಧಾರವಾಡ.

ಪ್ರತಿ ಮಾಹಿತಿಗಾಗಿ:

1. ಈ ಕಛೇರಿಯ ಇ ಆಡಳಿತ ಶಾಖೆಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
2. ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.